

**International Journal of Kannada Research**
www.kannadajournal.com

**ISSN: 2454–5813**
IJKR 2021; 7(2): 179-181
© 2021 IJKR
www.kannadajournal.com
Received: 17-02-2021
Accepted: 20-03-2021

**ಮಲ್ಲೇಶಪ್ಪ ಸಿದ್ರಾಂಪುರ**
ಸಹ ಪ್ರಾಧ್ಯಾಪಕರು,
ಪ್ರಕಾಶನ ಕೇಂದ್ರ, ದ್ರಾವಿಡ ವಿಶ್ವವಿದ್ಯಾಲಯ,
ಶ್ರೀನಿವಾಸವನಂ, ಕುಪ್ಪಂ,
ಚಿತ್ತೂರು ಜಿಲ್ಲೆ,
ಆಂಧ್ರಪ್ರದೇಶ, ಭಾರತ

**Corresponding Author:**
**ಮಲ್ಲೇಶಪ್ಪ ಸಿದ್ರಾಂಪುರ**
ಸಹ ಪ್ರಾಧ್ಯಾಪಕರು,
ಪ್ರಕಾಶನ ಕೇಂದ್ರ, ದ್ರಾವಿಡ ವಿಶ್ವವಿದ್ಯಾಲಯ,
ಶ್ರೀನಿವಾಸವನಂ, ಕುಪ್ಪಂ,
ಚಿತ್ತೂರು ಜಿಲ್ಲೆ,
ಆಂಧ್ರಪ್ರದೇಶ, ಭಾರತ

# ವರ್ತಮಾನದ ಕಲಿಕೆ ಬಯಸುತ್ತಿರುವ ಬೋಧನೆಯ ಹೊಸತನಗಳ ಸಾಧ್ಯತೆಗಳು

**ಮಲ್ಲೇಶಪ್ಪ ಸಿದ್ರಾಂಪೂರ**

**ಂಥಣಡಿಚಿಛಿಣ**
ಇದು ಅತ್ಯಂತ ವೇಗದಿಂದ ಬದಲಾಗುತ್ತಿರುವ ಕಾಲ. ಕಾಲಕ್ಕೆ ತಕ್ಕಂತೆ ಬದುಕಿನಲ್ಲಿ ಬದಲಾವಣೆಗಳು ಆಗಬೇಕಾದುದು ಅನಿವಾರ್ಯ. ಅಂತಹ ಬದಲಾವಣೆಗಳಲ್ಲಿ ಕಲಿಕೆಯ ಬದಲಾವಣೆಯೂ ಒಂದು. ಗುರುಕುಲ ಪದ್ಧತಿಯಿಂದ ಪ್ರಾರಂಭವಾದ ಈ ದೇಶದ ಕಲಿಕೆ ವಿಧಾನವು ಇಂದು ತರಗತಿಗಳಿಲ್ಲದೆ ಕೇವಲ ಮನೆಯಲ್ಲಿ ಕುಳಿತು ಕಲಿಯಬಹುದಾದ ಎನ್ನುವ ದಿನಗಳು ಬಂದಿವೆ. ಇಂತಹ ಸಂದರ್ಭದಲ್ಲಿ ವರ್ತಮಾನದ ಕಲಿಕೆಯು ಯಾವೆಲ್ಲ ಬಗೆಯ ಹೊಸತನಗಳನ್ನು ಬಯಸುತ್ತಿದೆ? ಅಂತಹ ಹೊಸತನ ಎನ್ನುವ ಪರಿಕಲ್ಪನೆ ಹುಟ್ಟಿಕೊಳ್ಳಲು ಕಾರಣಗಳೇನು? ಹೊಸತನವನ್ನು ಕಲಿಸುವ ಭರದಲ್ಲಿ ಕಲಿಕೆಯ ಗುಣಮಟ್ಟ ಎಂತಹದ್ದು ಎನ್ನುವುದನ್ನು ಪರೀಕ್ಷಿಸಲಾಗುತ್ತಿದೆಯೇ? ವಿಜ್ಞಾನ, ತಂತ್ರಜ್ಞಾನದಂತಹ ಕಲಿಕೆಯ ವಿಧಾನಗಳಿಗೂ ಹಾಗೂ ಪರಂಪರಾಗತವಾಗಿ ಬಂದಂತಹ ಕೋರ್ಸ್‌ಗಳ ಕಲಿಕೆಗೂ ಈ ಹೊಸತನ ಎನ್ನುವುದರಲ್ಲಿ ವ್ಯತ್ಯಾಸವಿದೆಯೇ? ಅದರಲ್ಲೂ ಭಾಷೆಯ ಬೋಧನೆಯಲ್ಲಿ ಹೊಸತನಗಳನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ? ಎನ್ನುವಂತಹ ಪ್ರಶ್ನೆಗಳಿಗನ್ನಿಟ್ಟುಕೊಂಡು ಈ ಪ್ರಬಂಧವನ್ನು ಬರೆಯಲಾಗಿದೆ.
ಆಧುನಿಕ ತಂತ್ರಜ್ಞಾನವು ಭಾಷಾ ಕಲಿಕೆಯಲ್ಲಿ ಹೇಗೆಲ್ಲಾ ಸಹಾಯಕವಾಗುತ್ತಿದೆ. ಅದರಲ್ಲೂ ಮುಖ್ಯವಾಗಿ ಒಂದು ಸೀಮಿತ ಪ್ರದೇಶದ ಪ್ರಾಂತೀಯ ಭಾಷೆಗಳ ಕಲಿಕೆಯಲ್ಲಿ ತಂತ್ರಜ್ಞಾವನ್ನು ಹೇಗೆ ದುಡಿಸಿಕೊಳ್ಳಲಾಗುತ್ತಿದೆ. ಇದನ್ನು ಕಲಿಸುವವರು ಮತ್ತು ಕಲಿಯುವವರು ಎಷ್ಟರ ಪ್ರಮಾಣದಲ್ಲಿ ಬಳಸುತ್ತಿದ್ದಾರೆ. ಈ ಬಳಸುವಿಕೆ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ. ಎನ್ನುವ ಅಂಶಗಳು ಇಲ್ಲಿ ಮುಖ್ಯವಾಗಿ ಚರ್ಚಿಸಲ್ಪಟ್ಟಿವೆ. ತರಗತಿಗಳಿಗೆ ಹೋಗಿ ನೇರವಾಗಿ ಕಲಿತು, ಅಲ್ಲಿಂದ ಗ್ರಂಥಾಲಯಗಳಿಗೆ ಹೋಗಿ ಪುಸ್ತಕಗಳನ್ನು ಹುಡುಕಿಕೊಂಡು ಟಿಪ್ಪಣಿಗಳನ್ನು ಮಾಡಿಕೊಳ್ಳುವ ಕಾಲವಿತ್ತು. ಇಂದು ಮನೆಯಲ್ಲಿಯೇ ಕುಳಿತು ಇಂಟರ್‌ನೆಟ್‌ನ ಸಹಾಯದಿಂದ ಇ–ಗ್ರಂಥಾಲಯಗಳಿಂದ ಪುಸ್ತಕಗಳನ್ನು ಓದಬಹುದು. ಜೊತೆಗೆ ಟ್ಯಾಬ್‌ಗಳನ್ನು ಬಳಸಿಕೊಂಡು ಎಲ್ಲೆಂದರಲ್ಲಿ ಇ–ಪುಸ್ತಕಗಳನ್ನು ಓದಬಹುದು. ಓದುವುದಕ್ಕೆ ಸಾಕಾಯಿತು ಅನ್ನಿಸಿದಾಗ ಕೇಳುವ ಪುಸ್ತಕಗಳನ್ನು ಕೇಳಬಹುದು. ಹೀಗೆ ಆಧುನಿಕತೆ ಎನ್ನುವುದು ಅನೇಕ ರೀತಿಯಲ್ಲಿ ಕಲಿಕೆಯ ಪಲ್ಲಟಗಳನ್ನು ಉಂಟುಮಾಡಿದೆ. ಅಂತಹ ಪಲ್ಲಟಗಳನ್ನು ಗುರುತಿಸುವುದೇ ಈ ಪ್ರಬಂಧದ ಮುಖ್ಯ ಉದ್ದೇಶ.

**ಏಜಥಿತಿಠಡಿಜ:** ಡಿಜಿಟಲ್, ಇ–ಪುಸ್ತಕ, ಆಡಿಯೋ ಪುಸ್ತಕ, ತಂತ್ರಜ್ಞಾನ, ಪವರ್ ಪಯಿಂಟ್, ಕಂಪ್ಯೂಟರ್, ಲ್ಯಾಪಟಾಪ್, ಇಂಟರ್‌ನೆಟ್, ಇ–ಓದು.

## ಮುನ್ನುಡಿ

ಉನ್ನತ ಶಿಕ್ಷಣದಲ್ಲಿನ ಕನ್ನಡ ಕಲಿಕೆ ಎಂದರೇನು? ಭಾಷೆಯನ್ನು ಕಲಿಸುವುದೋ? ಅಥವಾ ಕನ್ನಡ ಭಾಷೆಯ ಸಾಹಿತ್ಯವನ್ನು ಕಲಿಸುವುದೋ? ಬಹುಶಃ ಈ ಎರಡನ್ನೂ ನಾವು ಮಾಡುತ್ತಿಲ್ಲ. ಭಾಷೆಯನ್ನು ಕಲಿಸಲಿಕ್ಕೆ ಅದು ಅನ್ಯ ಭಾಷೆ ಅಲ್ಲ. ಅದು ಮಾತೃಭಾಷೆ. ನೆಲದ ಭಾಷೆ. ಅದರಲ್ಲಿ ಕಲಿಸುವುದೇನೂ ಇರುವುದಿಲ್ಲ. ಅಬ್ಬಾಬ್ಬ ಎಂದರೆ ಒಂದಿಷ್ಟು ತಿದ್ದಬಹುದಷ್ಟೆ; ತಿದ್ದುವಷ್ಟು ಸಾಮರ್ಥ್ಯ ಬೋಧಿಸುವವರಲ್ಲಿದ್ದರೆ ಮಾತ್ರ. ಹಾಗೆಯೇ ಸಾಹಿತ್ಯದ ಕಲಿಕೆಯೂ ಇದೇ ತೆರನದ್ದು. ಸಾಹಿತ್ಯ ಕಲಿಸುವಂತಹದ್ದಲ್ಲ, ಅರ್ಥೈಸುವಂತಹದ್ದು. ಕಲಿಸುವಿಕೆಗೂ ಮತ್ತು ಅರ್ಥೈಸುವಿಕೆಗೂ ವ್ಯತ್ಯಾಸವಿದೆ. ಹಾಗಾಗಿ ಉನ್ನತ ಶಿಕ್ಷಣದಲ್ಲಿಯ ಬೋಧನೆ ಯಾವಾಗಲೂ ಭಾಷೆಯನ್ನಾಗಲಿ ಅಥವಾ ಆ ಭಾಷೆಯ ಸಾಹಿತ್ಯವನ್ನು ಕಲಿಸುವುದಲ್ಲ. ಅದು ಒಂದು ಸಂವೇದನೆಯನ್ನು ಅರ್ಥೈಸಿಕೊಳ್ಳುವುದು, ಅರ್ಥೈಸುತ್ತಲೇ ಅದರ ಸತ್ವವನ್ನು ವಿಸ್ತರಿಸುವುದು. ಯಾಕೆ ಈ ಸಂವೇದನೆಯನ್ನು ಅರಿತುಕೊಳ್ಳಬೇಕೆಂದರೆ ಅದು ಒಂದು

ನೆಲದ ಸಂಕಟ ಮತ್ತು ಸಂಭ್ರಮ ಇವೆರಡನ್ನೂ ಒಳಗೊಂಡಿರುತ್ತದೆ. ಇದರ ಭಾಗವಾಗಿಯೇ ಇಂದು ನಮ್ಮ ಭಾಷೆಯನ್ನು, ಭಾಷೆಯ ಸಾಹಿತ್ಯವನ್ನು ಬೋಧನೆಗೆ ಆಯ್ದುಕೊಂಡಿದ್ದೇವೆ. ಇದು ಮೊದಲನೆದು.

ಇನ್ನು ಮುಂದಿನ ಹಂತ ಬೋಧನೆಯ ವಿಧಾನಕ್ಕೆ ಸಂಬಂಧಿಸಿದ್ದು. ಬೋಧನೆಯ ವಿಧಾನವು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿದೆ. ಅದು ಬದಲಾಗಬೇಕು ಸಹ. ಬದಲಾಗಬೇಕೆಂದರೆ ಯಾವ ರೀತಿ ಬದಲಾಗಬೇಕು? ಎನ್ನುವುದು ಮೊದಲನೆ ಪ್ರಶ್ನೆ. ವರ್ತಮಾನದ ಕಲಿಕೆಯ ವಿಧಾನ, ಕಲಿಕಾ ಸಾಮರ್ಥ್ಯ, ಕಲಿಕಾ ಆಸಕ್ತಿ, ಕಲಿಕಾ ಆಕರ್ಷಣೆ ಇವುಗಳನ್ನು ಮೊದಲಿಗೆ ಗಮನಿಸಬೇಕು. ಸಾಹಿತ್ಯ ಪಠ್ಯವೊಂದನ್ನು ಆಯ್ದುಕೊಂಡು ಅದು ಒಳಗೊಂಡಿರುವ ಆಶಯಗಳನ್ನು, ಧೋರಣೆಗಳನ್ನು ಹೇಳಿದರೆ ಮುಗಿಯುವುದಿಲ್ಲ. ಮೇಲಾಗಿ ಈ ಕಾಲದ ಕಲಿಯುವವರ ಮೇಲೆ ಅಷ್ಟು ಪರಿಣಾಮ ಬೀರುವುದಿಲ್ಲ. ಹಾಗಾಗಿ ವರ್ತಮಾನವನ್ನು ಒಳಗೊಳ್ಳುವಂತಹ ಬೋಧನಾ ಮಾದರಿಯನ್ನು ಆಯ್ದುಕೊಳ್ಳಬೇಕು.

ಈ ಎರಡು ಅಂಶಗಳ ಉಲ್ಲೇಖದ ನಂತರ ವರ್ತಮಾನದ ಕಲಿಕೆಯು ಯಾವ ರೀತಿಯ ಬೋಧನೆ ವಿಧಾನಗಳಿಗೆ ಆಕರ್ಷಿತಗೊಳ್ಳುತ್ತಿದೆ ಎನ್ನುವುದನ್ನು ಗಮನಿಸೋಣ. ಭಾಷೆ ಮತ್ತು ಸಾಹಿತ್ಯದ ವಿಷಯದಲ್ಲಿ ಕಲಿಸಲು ಬಳಸುವ ಊರಣ(ಸಾಮಗ್ರಿ) ಯಾವಾಗಲೂ ಒಂದೇ ತೆರನಾಗಿರುತ್ತದೆ. ಆದರೆ ಅದರ ಹೊರಮೈ ಮಾತ್ರ ಆಯಾ ಕಾಲಮಾನದ ಒತ್ತಾಸೆಗಳಿಗೆ ಅನುಗುಣವಾಗಿ ಹೊಸಹೊಸ ರೂಪಗಳನ್ನು ಪಡೆದುಕೊಳ್ಳುತ್ತದೆ. ಕನ್ನಡ ಬೋಧನೆಯ ವೈಶಿಷ್ಟ್ಯತೆ ಇರುವುದೇ ಇಲ್ಲಿ. ನಿದರ್ಶನಕ್ಕೆ ಪಂಪನ 'ವಿಕ್ರಮಾರ್ಜುನ ವಿಜಯ'ವು ಎಲ್ಲಾ ಕಾಲಕ್ಕೂ ವಿಕ್ರಮಾರ್ಜುನ ವಿಜಯವೆ. ಆದರೆ ಆ ಕೃತಿ ಒಳಗೊಂಡ ಮೌಲ್ಯಗಳು ಕಾಲಕಾಲದ ಸಾಂಸ್ಕೃತಿಕ ಬದುಕಿಗೆ ಅನುಗುವಾಗಿ ಪುನರ್ ಮೌಲ್ಯೀಕರಣಕ್ಕೆ ಒಳಗಾಗುತ್ತಿವೆ. ಒಳಗಾಗಬೇಕು ಸಹ. ಇದರಂತೆಯೇ ಜೈನರ ಧಾರ್ಮಿಕ ಕೃತಿಗಳಾಗಿರಬಹುದು, ವಚನಕಾರರ ವಚನಗಳಾಗಿರಬಹುದು, ದಾಸರ ಕೀರ್ತನೆಗಳಾಗಿರಬಹುದು, ತತ್ತ್ವಪದಕಾರರ ಪದಗಳಾಗಿರಬಹುದು, ಇತರೆ ಕವಿಗಳ ಕಾವ್ಯಗಳಾಗಿರಬಹುದು... ಇತ್ಯಾದಿ ಎಲ್ಲವೂ ಅವು ರಚನೆಗೊಂಡ ಸಂದರ್ಭದಿಂದ ಇಂದಿನವರೆಗೂ ಭಿನ್ನ ಆಲೋಚನಾ ಲಹರಿಯ ಮೂಲಕ ಅರ್ಥೈಸಲ್ಪಟ್ಟಿವೆ. ಇಲ್ಲಿ ಯಾಕೆ ಈ ಮಾತನ್ನು ಹೇಳಲಾಯಿತು ಎಂದರೆ, ಇಂದು ನಾವು ಬೋಧನ ವಿಧಾನವೆಂದೊಡನೆ ಕಲಿಸುವ ಕ್ರಮವನ್ನೇ ಬದಲಿಸಬೇಕೆ ಎನ್ನುವ ಪ್ರಶ್ನೆ ಬರುತ್ತದೆಯಾದ್ದರಿಂದ. ಯಾಕೆಂದರೆ ಇಂದು ನಾವಿರುವುದು ಡಿಜಿಟಲ್ ಯುಗದಲ್ಲಿ. ಇಂದು ಎಲ್ಲವನ್ನೂ ಚಿತ್ರರೂಪದಲ್ಲಿ, ಕೇಳುವ (Audio) ರೂಪದಲ್ಲಿ, ದೃಶ್ಯ (Video) ರೂಪದಲ್ಲಿ ಕಲಿಯಬೇಕು, ಕಲಿಸಬೇಕು ಎನ್ನುವ ವಾದ ಹೆಚ್ಚಾಗುತ್ತಿದೆ. ಈ ಬಗೆಯ ಬೋಧನೆ ಒಮ್ಮುಖವಾಗಿಬಿಡುತ್ತದೆ. ಒಮ್ಮುಖ ಬೋಧನೆ ಸಾಹಿತ್ಯದ ಸಂದರ್ಭದಲ್ಲಿ ಅಷ್ಟೊಂದು ಉಪಯುಕ್ತವಲ್ಲ. ಏಕೆಂದರೆ ಒಂದು ಸಾಹಿತ್ಯ ಪಠ್ಯವನ್ನು ಅರ್ಥೈಸುವಾಗ ಈ ಬಗೆಯ ಬೋಧನಾ ವಿಧಾನ ಹೊಸ ಹೊಸ ಆಲೋಚನೆಗಳ ಹುಟ್ಟಿಗೆ ಅಷ್ಟೊಂದು ಸಹಕಾರಿಯಾಗಲಾರದೇನೋ. ಆದಾಗ್ಯೂ ಹೊಸ ಕಾಲ ಬಯಸುವ ಕಲಿಕೆಯ ವಿಧಾನವನ್ನು ನಾವು ಅಳವಡಿಸಿಕೊಳ್ಳಲೇಬೇಕು. ಆ ಹೊಸ ಬೋಧನಾ ವಿಧಾನ ಸಾಹಿತ್ಯದ ಆಶಯವನ್ನು, ಸಂವೇದನೆಗಳ ಆಂತರ್ಯವನ್ನು ಬಾಧಿಸಕೂಡದಷ್ಟೆ. ಈ ಹಿನ್ನೆಲೆಯಲ್ಲಿ ವರ್ತಮಾನದ ಕಲಿಕೆಯು ಯಾವ ಬಗೆಯ ಬೋಧನೆಯನ್ನು ಬಯಸುತ್ತಿದೆ, ಅದಕ್ಕನುಗುಣವಾಗಿ ಯಾವ ರೀತಿಯ ಬೋಧನಾ ವಿಧಾನಗಳು ನಮ್ಮಲ್ಲಿವೆ, ಅವುಗಳಲ್ಲಿ ಇನ್ನೂ ಬದಲಾಗಬೇಕಾದ ಬಗೆ ಯಾವುದು, ಯಾವ ಬಗೆಯ ಬೋಧನಾ ವಿಧಾನಗಳು ಪ್ರಸ್ತುತ ಸಂದರ್ಭ ಕಲಿಕೆ ಆಸೆಯನ್ನು ನೀಗಿಸಬಲ್ಲವು... ಈ ಮುಂತಾದ ಅಂಶಗಳೆಡೆ ಒಂದಿಷ್ಟು ಅವಲೋಕಿಸಬೇಕಾಗಿದೆ.

**ತಂತ್ರಜ್ಞಾನಾಧಾರಿತ ಬೋಧನೆಯ ಸಾಧ್ಯಾಸಾಧ್ಯತೆಗಳ ಪರಿಶೀಲನೆ :**

ಈಗಾಗಲೇ ಹೇಳಿದಂತೆ ಇದು ತಂತ್ರಜ್ಞಾನಗಳ ಯುಗ. ದಿನಕ್ಕೊಂದರಂತೆ ಹೊಸ ಹೊಸ ತಂತ್ರಜ್ಞಾನಗಳು ಆವಿಷ್ಕಾರಗೊಳ್ಳುತ್ತಿವೆ. ರಾತ್ರಿ ಮಲಗುವ ಮುನ್ನ ಇದ್ದ ತಂತ್ರಜ್ಞಾನ ಬೆಳಗ್ಗೆ ಏಳುವ ಮುನ್ನವೇ ಬದಲಾಗುವಂತಹ ಕಾಲಘಟ್ಟವಿದು. ಇಂತಹ ಸಂದರ್ಭದಲ್ಲಿ ಒಂದು ಭಾಷೆಯನ್ನು, ಆ ಭಾಷೆಯ ಸಾಹಿತ್ಯದ ಪಠ್ಯವೊಂದನ್ನು ಆಯ್ದುಕೊಂಡು ಅದನ್ನು ತಂತ್ರಜ್ಞಾನದೊಂದಿಗೆ ಅಳವಡಿಸಿಕೊಂಡು ಬೋಧಿಸಲು ಸಾಧ್ಯವಿದೆಯೆ? ಯಾವುದೋ ಒಂದು ಹಳಗನ್ನಡ ಪದ್ಯವನ್ನು ಟೈಪ್ ಮಾಡಿ ಪರದೆಯ ಮೇಲೆ ತೋರಿಸಿ, ಓದಿ, ಸಾಧ್ಯವಾದಷ್ಟು ಅದರ ಅರ್ಥವನ್ನು ಅದರ ಕೆಳಗಡೆಯ ಬರೆದು ಓದಬಹುದು. ಈ ಬಗೆಯ ಬೋಧನೆ ಎಷ್ಟರ ಮಟ್ಟಿಗೆ ಪರಿಣಾಮಕಾರಿ? ಅಂದರೆ Power Point ನ್ನು ಬಳಸಿಕೊಳ್ಳುವ ವಿಧಾನದ ಬಗ್ಗೆ ಇಲ್ಲಿ ಹೇಳುತ್ತಿದ್ದೇನೆ. ಈ ಬಗೆಯ ಬೋಧನೆ ಇಂದು Fashion ಆಗುತ್ತಿದೆ. ಅದರೆ ಅದೊಂದು Passion ಆಗಬೇಕೆ ಹೊರತು Fashion ಅಲ್ಲ ಎನ್ನುವುದನ್ನು ಮೊದಲು ಗಮನದಲ್ಲಿಟ್ಟುಕೊಳ್ಳಬೇಕು. ಯಾಕೆ ಅದನ್ನು Passion ಆಗಬೇಕು ಎಂದೆನೆಂದರೆ, ಯಾವುದೋ ಒಂದು ವಿಷಯದ ಬಗ್ಗೆ ನಾವು ತಯಾರಿಸಿದ ಈ ಬಗೆಯ Power Point ಆಧಾರಿತ ಸಾಮಗ್ರಿಯನ್ನು ನಾವು ಬೇರೆ ಬೇರೆ ಸಂಗ್ರಹಿಸಿಡಬಹುದು. ಮತ್ತು ಆ ಸಂಗ್ರಹಿಸಿದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡುವುದರಿಂದ ಅವರು ಅದನ್ನು ತಮಗೆ ಅನುಕೂಲವಾದಾಗ, ಅನುಕೂಲವಾದೆಡೆ ಯಾವುದೋ ಕಂಪ್ಯೂಟರ್‌ನಲ್ಲೋ, ಲ್ಯಾಪ್‌ಟಾಪ್‌ನಲ್ಲೋ, ಐಪಾಡ್‌ಗಳಲ್ಲೋ ಓದಿಕೊಳ್ಳಬಹುದು.

ಸರಿ, ಈ ವಿಧಾನವನ್ನು ನಾವು ಬೋಧನೆಗೆ ಆಯ್ಕೆ ಮಾಡಿಕೊಳ್ಳಲಿಕ್ಕೆ ಸಾಧ್ಯವಿದೆ. ಆದರೆ ಈ ಬೋಧನಾ ವಿಧಾನ ಎಷ್ಟು ಜನ ವಿದ್ಯಾರ್ಥಿಗಳನ್ನು ಮುಟ್ಟಬಲ್ಲದು. ಭಾರತದಂತಹ ದೇಶದಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನವನ್ನು ಬಳಸುವಷ್ಟು ಸಮರ್ಥರಿದ್ದಾರೇ? ಒಂದು ವೇಳೆ ಇದ್ದರೂ ಅವರೆಲ್ಲರೂ ಆಧುನಿಕ ಸಲಕರಣೆಗಳನ್ನು (Computer, Laptop… ಇತ್ಯಾದಿ) ಬಳಸುವಷ್ಟು ಆರ್ಥಿಕವಾಗಿ ಸದೃಢರಿದ್ದಾರೆಯೆ? ಎನ್ನುವ ಪ್ರಶ್ನೆಗಳು ಸಹಜವಾಗಿಯೇ ಹುಟ್ಟುತ್ತವೆ. ಇದು ಕಷ್ಟಸಾಧ್ಯವಾದರೂ ಇಂದು ಬಹುತೇಕ ಶಿಕ್ಷಣ ಸಂಸ್ಥೆಗಳು ಆಧುನಿಕ ಈ ಬಗೆಯ ಆಧುನಿಕ ತಂತ್ರಜ್ಞಾನಾಧಾರಿತ ಸಲಕರಣೆಗಳನ್ನು ಕಡ್ಡಾಯವಾಗಿ ಬಳಸುತ್ತಿವೆ. ಹಾಗೆಯೇ ನಮ್ಮ ಪ್ರಭುತ್ವಗಳೂ ಸಹ ಬಡ ವಿದ್ಯಾರ್ಥಿಗಳಿಗೆ ಉಚಿತ Laptop ಕೊಡುವಂತ ಯೋಜನೆಗಳನ್ನೂ ಸಹ ಜಾರಿಗೆ ತಂದಿವೆ. ಈ ನಿಟ್ಟಿನಲ್ಲಿ ಇದೊಂದು ಆಶಾದಾಯಕ ಬೆಳವಣಿಗೆ. ಹಾಗೆಯೇ ಈ ಬೋಧನಾ ವಿಧಾನ ಒಂದಿಷ್ಟು ಯಶಸ್ವಿಯೂ ಆಗಬಹುದು. ಏಕೆಂದರೆ ಒಂದು ವೇಳೆ ತರಗತಿಯಲ್ಲಿ ಬೋಧಿಸುವಾಗ ಗೈರುಹಾಜರಾದ ವಿದ್ಯಾರ್ಥಿಗೆ ಅಧ್ಯಾಪಕರು ತಯಾರಿಸಿದ ಸಾಮಗ್ರಿಯನ್ನು ಆತ ಯಾವಾಗ ಬೇಕಾದರೂ ಓದಿಕೊಳ್ಳಬಹುದು.

ಇದು ಇಷ್ಟಕ್ಕೆ ನಿಂತರೆ ಸಾಕಾಗುವುದಿಲ್ಲ. ಇದಕ್ಕೆ ತಕ್ಕಂತೆ ನಾವು ಕನ್ನಡ ಭಾಷೆಯನ್ನು ತಂತ್ರಜ್ಞಾನದ ಭಾಷೆಯನ್ನಾಗಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಇಂದು ಒಂದಿಷ್ಟು ಬೆಳವಣಿಗೆಗಳು ನಡೆದಿವೆ. ಕೆಲವರ್ಷಗಳ ಹಿಂದೆ ಗಣಕಯಂತ್ರದಲ್ಲಿ ಕನ್ನಡ ತಂತ್ರಾಂಶವಿದ್ದರೆ ಮಾತ್ರ ಕನ್ನಡವನ್ನು ಓದಲು ಸಾಧ್ಯವಿತ್ತು. ಆದರೆ ಇಂದು ಯೂನಿಕೋಡ್ ತಂತ್ರಾಂಶವನ್ನು ಬಳಸಿ ಕನ್ನಡದ ತಂತ್ರಾಂಶವನ್ನು

ಗಣಕಯಂತ್ರದಲ್ಲಿ ಅನುಷ್ಠಾನ (Install) ಗೊಳಿಸಿಕೊಳ್ಳದೇ ಓದಬಹುದು. ಬರೆಯಬಹುದು ಸಹ. ಈ ಬಗೆಯ ಸೌಕರ್ಯದಿಂದ ಕನ್ನಡವನ್ನು ಆಕರ್ಷಕವಾಗಿ ವರ್ತಮಾನದ ಕಲಿಕೆಯು ಆಶಿಸುತ್ತಿರುವ ರೀತಿಯಲ್ಲಿ ಬೋಧಿಸಲಿಕ್ಕೆ ಒಂದಿಷ್ಟು ಅವಕಾಶವಿದೆ. ಮತ್ತು ವಿದ್ಯಾರ್ಥಿಗಳ ಒಂದು ಬಗೆಯ ಆಸೆಯನ್ನು ಈಡೇರಿಸಲು ಸಾಧ್ಯವಿದೆ. ಆದರೆ ಈ ವಿಧಾನ ವಿದ್ಯಾರ್ಥಿಗಳನ್ನು ಯಾಂತ್ರಿಕಗೊಳಿಸಿ, ಅವರ ಆಲಿಸುವಿಕೆಯ, ಗ್ರಹಿಕೆಯನ್ನು ಸೀಮಿತಗೊಳಿಸಬಲ್ಲದು ಎನ್ನುವುದನ್ನೂ ಇಲ್ಲಿ ಮರೆಯುವಂತಿಲ್ಲ. ಹಾಗೆಯೇ ಇಲ್ಲಿ ಹೇಳಲೇಬೇಕಾದ ಇನ್ನೊಂದು ಅಂಶ ಈ ಬಗೆಯ ವಿಧಾನದಲ್ಲಿ ಕಲಿಸುವ ಮತ್ತು ಕಲಿಯುವ ಇಬ್ಬರೂ ಇಂಗ್ಲಿಷ್‌ನ್ನು ಒಂದಿಷ್ಟರ ಮಟ್ಟಿಗಾದರೂ ಬಲ್ಲವರಾಗಿರಬೇಕು. ಯಾಕೆ ಈ ಮಾತನ್ನು ಹೇಳಿದೆನೆಂದರೆ ತಂತ್ರಜ್ಞಾನಾಧಾರಿತ ಸಲಕರಣೆಗಳನ್ನು ಬಳಸಿಕೊಂಡು ಕನ್ನಡವನ್ನು ಕಲಿಸುತ್ತೇನೆ, ಕಲಿಯುತ್ತೇನೆ ಎನ್ನುತ್ತಲೇ ನಾವು ಮತ್ತೊಂದು ಭಾಷೆಗೆ ದಾಸರಾಗುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಾವು ಕಲಿಸುವುದು ಏನನ್ನು? ಕನ್ನಡವನ್ನೋ? ಕನ್ನಡದ ಹೆಸರಿನಲ್ಲಿ ಮತ್ತೊಂದು ಭಾಷೆಯನ್ನೋ? ಕಲಿಕೆಗೆ ತಂತ್ರಜ್ಞಾನವು ಪೂರಕವಾಗಬೇಕೆ ಹೊರತು, ತಂತ್ರಜ್ಞಾನವೇ ಕಲಿಕೆಯಾಗಬಾರದು. ಬಹುಶಃ ಇಂದು ಆಗುತ್ತಿರುವುದು ಇದೆ. ಕಲಿಕೆಗೆ ಪೂರಕವಾಗಬೇಕಾದದ್ದೆ ಪ್ರಧಾನವಾದಾಗ ನಮ್ಮ ಮೂಲ ಆಶಯ ಬೇರೆಯ ರೂಪವನ್ನೇ ಪಡೆದುಕೊಳ್ಳುತ್ತದೆ.

ಇಲ್ಲಿಯೇ ಪ್ರಸ್ತಾಪಿಸಬಹುದಾದ ಇನ್ನೊಂದು ಮುಖ್ಯ ಅಂಶ ವೃತ್ತಿ ಶಿಕ್ಷಣಕ್ಕೆ ದೊರೆಯುತ್ತಿರುವ ಪ್ರಾಮುಖ್ಯತೆ ಸಾಹಿತ್ಯ, ಸಮಾಜ ವಿಜ್ಞಾನಗಳಂತಹ ವಿಷಯಗಳನ್ನು ಅಲಕ್ಷ್ಯಕ್ಕೀಡು ಮಾಡುತ್ತಿದೆ. ಇದು ವಿದ್ಯಾ ವಿಧಾನವನ್ನು ವಿವೇಕಮುಖಿಯಿಂದ ವಾಣಿಜ್ಯಮುಖಿಯಾಗಿಸುತ್ತದೆ. ಇದೊಂದು ಅಪಾಯದ ಬಹುದೊಡ್ಡ ಮುನ್ಸೂಚನೆ ಎನ್ನುವುದನ್ನು ಅರಿತುಕೊಳ್ಳಬೇಕು. ಮತ್ತು ಇಂತಹ ಸಂದರ್ಭದಲ್ಲಿ ಉನ್ನತ ಶಿಕ್ಷಣ ಪದ್ಧತಿಯನ್ನು ಪುನರ್ ಸಂಯೋಜಿಸುವ ಕಾರ್ಯಕ್ಕೆ ಮುಂದಾಗಬೇಕು.

**ವಿದ್ಯುನ್ಮಾನ ಓದು (E-Study)**

ಹೊಸ ತಂತ್ರಜ್ಞಾನ ರೂಪುಗೊಂಡಂತೆ ಕಲಿಕಾ ವಿಧಾನದಲ್ಲಿಯೂ ಹೊಸತನಗಳನ್ನು ಆಶಿಸುವುದು ಸಹಜ. ಇದರಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ಆಕರ್ಷಿಸುತ್ತಿರುವುದು ವಿದ್ಯುನ್ಮಾನ ಓದು. ವಿದ್ಯುನ್ಮಾನ ಓದು ಎಂದರೆ ಪುಸ್ತಕಗಳನ್ನು Soft Copy ಯ ರೂಪದಲ್ಲಿಯೇ ಸಂಗ್ರಹಿಸುವುದು ಓದುವುದು. ಇದಕ್ಕಾಗಿಯೇ ಇಂದು ವಿದ್ಯುನ್ಮಾತನ ಪುಸ್ತಕ (e-Books) ಗಳು, Digital Library ಗಳು ಬಂದಿವೆ. ಖಾಸಗಿ ಬ್ಲಾಗ್‌ಗಳು, ಸರ್ಕಾರಿ ಅಂತರ್ಜಾಲ ತಾಣಗಳು ಇಂದು ವಿದ್ಯುನ್ಮಾನ ಪುಸ್ತಕಗಳನ್ನು ಓದುಗರಿಗೆ ನೀಡುತ್ತಿವೆ. ಈ ಬಗ್ಗೆ ಕರ್ನಾಟಕ ಸರಕಾರ ಹಾಕಿಕೊಂಡ ಯೋಜನೆ ಸ್ತುತ್ಯರ್ಹವಾದುದು. ಕಣಜ ಅಂತರ್ಜಾಲ ತಾಣದಲ್ಲಿ ಈಗಾಗಲೇ ಅನೇಕ ವಿದ್ಯುನ್ಮಾನ ಕನ್ನಡ ಪುಸ್ತಕಗಳು ಲಭ್ಯವಿವೆ. ಇವುಗಳ ಜೊತೆಗೆ ಇತರೆ ಖಾಸಗಿ ಹಾಗೂ ಕೆಲ ವೈಯುಕ್ತಿಕ ಬ್ಲಾಗ್‌ಗಳಲ್ಲಿಯೂ ಅನೇಕ ಕನ್ನಡ ಪುಸ್ತಕಗಳು ಓದುಗರಿಗೆ ಸಿದ್ಧವಿವೆ. ಹಾಗೆಯೇ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧಗಳು shodhaganga ಎನ್ನುವ ಅಂತರ್ಜಾಲ ತಾಣದಲ್ಲಿ ನಮಗೆ ಉಚಿತವಾಗಿ ದೊರೆಯುತ್ತವೆ. ಒಂದು ಸಣ್ಣ ನೋಟ್‌ಬುಕ್‌ನ್ನು ಇಟ್ಟುಕೊಂಡು ಅದರಲ್ಲಿ ಸಾವಿರಾರು ಪುಸ್ತಕಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳಬಹುದು. ಅವುಗಳನ್ನು ನಮಗೆ ಬೇಕೆನಿಸಿದಾಗ, ಬೇಕಾದಲ್ಲಿ ಓದಬಹುದು. ಮುದ್ರಿತ ಪುಸ್ತಕದ ಒಂದು ಪ್ರತಿಯನ್ನು ಇಟ್ಟುಕೊಳ್ಳಬಹುದಾದ ಸ್ಥಳದಲ್ಲಿ ವಿದ್ಯುನ್ಮಾನ ಪುಸ್ತಕಗಳನ್ನು ಸಾವಿರಾರು ಸಂಖ್ಯೆಯಲ್ಲಿ ಇಟ್ಟುಕೊಳ್ಳಬಹುದು. ಇದು ನಮ್ಮ ಓಡಾಟದ ಸಂದರ್ಭದಲ್ಲಿ ತುಂಬಾ ಅನುಕೂಲಕರವಾದುದು. ಆದರೆ ಮುದ್ರಿತ ಪುಸ್ತಕಗಳನ್ನು ಓದುವಾಗಿನ ಆ ಮನೋ ಆನಂದ ಸಿಗುವುದಿಲ್ಲ. ಬದಲಾದ ಕಾಲವಲ್ಲವೇ ನಾವೂ ಬದಲಾಗಬೇಕು. ಅಷ್ಟೆ.

ಇಲ್ಲಿಯವರೆಗಿನದು ತಂತ್ರಜ್ಞಾನಾಧಾರಿತ ವಿಷಯದ ಕುರಿತ ಚರ್ಚೆ. ಇದರ ಜೊತೆಗೆ ವರ್ತಮಾನದ ಸಂದರ್ಭದಲ್ಲಿ ಕನ್ನಡ ಕಲಿಕೆಯ ಮಹತ್ತ್ವದ ಬಗ್ಗೆ ಒಂದುಷ್ಟು ಚರ್ಚಿಸೋಣ. ಹಾಗೆಯೇ ಇಂದಿನ ತಲೆಮಾರಿಗೆ ಅಗತ್ಯವಾದ ಕನ್ನಡ ಬೋಧನೆಯ ಸ್ವರೂಪ ಯಾವ ಬಗೆಯಲ್ಲಿರಬೇಕು ಎನ್ನುವುದರತ್ತ ಕೊಂಚ ಹೊರಳೋಣ. ಉನ್ನತ ಶಿಕ್ಷಣದಲ್ಲಿ ಕನ್ನಡದ ಬೋಧನೆ ಎಂದರೆ ಕನ್ನಡ ಪ್ರಜ್ಞೆಯ ಬೋಧನೆ. ಕನ್ನಡ ಪ್ರಜ್ಞೆಯನ್ನು ವಿವೇಕದಿಂದ ಗ್ರಹಿಸುವ ಮೂಲಕ ವರ್ತಮಾನದ ಸವಾಲುಗಳೊಂದಿಗೆ ಅದನ್ನು ಮುಖಾಮುಖಿಗೊಳಸಬೇಕು. ಕನ್ನಡಕ್ಕೆ ಸಂಬಂಧಿಸಿದ ಕಲಿಸುವಿಕೆಯ ವಿಷಯಕ್ಕೆ ಕುರಿತಾದ ಚರ್ಚೆಯೆಂದರೆ ಅದು ಕೇವಲ ಮಾತನಾಡುವ ಅಥವಾ ಬರೆಯುವ ಕನ್ನಡಕ್ಕೆ ಸಂಬಂಧಿಸಿದ್ದಲ್ಲ. ಬದಲಾಗಿ ಬದುಕುವ ಭಾಷೆಗೆ ಸಂಬಂಧಿಸಿದ್ದು ಎನ್ನುವ ಪ್ರಜ್ಞೆ ಜಾಗೃತಗೊಳ್ಳಬೇಕಾಗಿದೆ. ಹಾಗಾದ ಮಾತ್ರ ಕನ್ನಡವೂ ಬೆಳೆಯುತ್ತದೆ, ಕನ್ನಡ ಪ್ರಜ್ಞೆಯೂ ಬೆಳೆಯುತ್ತದೆ.

ವಿಶೇಷವಾಗಿ ಪದವಿ ಹಂತದಲ್ಲಿ ಇಂದು ಕನ್ನಡ ಬೋಧನೆ ಮತ್ತು ಕಲಿಕೆಗಳು ಕಾಟಾಚಾರಕ್ಕೊಳಗಾಗುತ್ತಿವೆ. ಈ ಪದ್ಧತಿಯನ್ನು ಬಿಡಬೇಕು. ಕನ್ನಡ ಸಾಂಸ್ಕೃತಿಕ ಪಠ್ಯಗಳ ಬೋಧನೆ ಮತ್ತು ಕಲಿಕೆ ಕಡ್ಡಾಯವಾಗಬೇಕು. ನಮ್ಮ ಸಾಂಸ್ಕೃತಿಕ ಪಠ್ಯಗಳ ಅಧ್ಯಾಪನ ಮತ್ತು ಅಧ್ಯಯನದಿಂದ ಜಾಗತೀಕರಣ ಅನೇಕ ಸವಾಲುಗಳಿಗೆ ಉತ್ತರ ಕೊಡಬಹುದಾಗಿದೆ. ಏಕೆಂದರೆ ಸರ್ವಕಾಲದ ಸವಾಲುಗಳಿಗೂ ಸಮಾಧಾನ ನೀಡಬಲ್ಲ ಸಾಮರ್ಥ್ಯವನ್ನು ಕನ್ನಡದ ಸಾಂಸ್ಕೃತಿಕ ಪಠ್ಯಗಳು ಒಳಗೊಂಡಿವೆ. ಅಂತಹ ಸಾಂಸ್ಕೃತಿಕ ಪಠ್ಯಗಳನ್ನು ಪಠ್ಯಕ್ರಮದಲ್ಲಿ ಸೇರಿಸುವ ಮೂಲಕ ವರ್ತಮಾನದ ತಲ್ಲಣಗಳಿಗೆ ಅನುಗುಣವಾಗಿ ಗತದ ಆ ಅಮೂಲ್ಯ ಸಂಪತ್ತನ್ನು ಬಳಸಿಕೊಳ್ಳಬೇಕು. ಆ ಮೂಲಕ ಕನ್ನಡದ ಸತ್ವವನ್ನು ಮನವರಿಕೆ ಮಾಡಿಕೊಳ್ಳುತ್ತ, ಹೊಸ ತಲೆಮಾರಿಗೆ ಅದನ್ನು ಪರಿಚಯಿಸಬೇಕು. ಸಾಹಿತ್ಯಿಕ ಪಠ್ಯಗಳ ಮರುಸೃಷ್ಟಿಯ ಕಾರ್ಯವೂ ನಡೆಯಬೇಕು. ಇದನ್ನೇ ವರ್ತಮಾನದ ಕಲಿಕೆ ಬಯಸುತ್ತಿದೆ. ಈ ದಿಸೆಯಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ಬಂದ ಕುವೆಂಪು ಓದುವಿನಂತಹ ಕೃತಿಗಳು ಇಂತಹ ಆಶಯಕ್ಕನುಗುಣವಾಗಿಯೇ ರೂಪುಗೊಂಡಿವೆ. ಈ ಬಗೆಯ ಕೃತಿಗಳ ರೂಪಿಸುವ ಪ್ರಕ್ರಿಯೆ ಹೆಚ್ಚಾಗಿ ನಡೆಯಬೇಕು. ಮತ್ತು ಅವುಗಳನ್ನೇ ಉನ್ನತ ಶಿಕ್ಷಣದಲ್ಲಿ ಪಠ್ಯಗಳನ್ನಾಗಿಯೂ ಬಳಸಿಕೊಳ್ಳಬೇಕು. ಈ ರೀತಿಯ ಹೊಸ ಬಗೆಯ ಸಾಹಿತ್ಯ ಪಠ್ಯಗಳ ಸೃಷ್ಟಿಯು ಹೊಸ ಕಾಲದ ಆಶಯಗಳಿಗೆ ಅನುಗುಣವಾಗಿದ್ದು, ಹೊಸ ಕಾಲದ ಓದಿನ ಸಾಧ್ಯತೆಗಳನ್ನು, ಬೋಧನೆಯ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ವರ್ತಮಾನದ ಅಗತ್ಯಕ್ಕೆ ತಕ್ಕ ಸಾಹಿತ್ಯ ಪಠ್ಯಗಳ ನಿರ್ಮಾಣ ಕ್ರಿಯೆ ನಡೆಯಬೇಕಾಗಿದೆ.